ಜಾರಿ ಅರ್ಜಿ.ನಂ.35/2021

ಆರ್.ಡಬ್ಲೂಃ 1- ಜಿ.ಎಂ. ಸುಬ್ರಮಣಿ ಬಿನ್ ಮುನಿವೆಂಕಟಪ್ಪ

ದಿನಾಂಕಃ 19/06/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ ತೀರ್ಪು ಋಣಿದಾರರ ಪರವಾಗಿ ಶ್ರೀ ಎಸ್.ವಿ. ವಕೀಲರಿಂದ**

ನಾನು ಈ ಅರ್ಜಿಯಲ್ಲಿ 3 ನೇ ತೀರ್ಪು ಋಣಿದಾರನಾಗಿದ್ದು ನ್ಯಾಯಾಲಯದ ಮುಂದೆ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇನೆ.

ನಾವು ಈ ಅರ್ಜಿಯಲ್ಲಿ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ

ನಿಶಾನೆ ಆರ್-1- ಅಸಲು ದಾವೆ ನಂ.193/2022 ರ ವಾದ ಪತ್ರದ ದೃಡೀಕೃತ ನಕಲು

ನಿಶಾನೆ ಆರ್-2- ಅಸಲು ದಾವೆ ನಂ.193/2022 ರ ಲಿಖಿತ ಹೇಳಿಕೆಯ ದೃಡೀಕೃತ ನಕಲು

ನಿಶಾನೆ ಆರ್-3- ಅಸಲು ದಾವೆ ನಂ.190/2022 ರ ವಾದ ಪತ್ರದ ದೃಡೀಕೃತ ನಕಲು

ನಿಶಾನೆ ಆರ್-4- ಅಸಲು ದಾವೆ ನಂ.190/2022 ರ ಲಿಖಿತ ಹೇಳಿಕೆಯ ದೃಡೀಕೃತ ನಕಲು

ನಿಶಾನೆ ಆರ್-5- ತೀರ್ಪು ಋಣಿ ದಾರ ಸಂಖ್ಯೆ 1(ಎ), (ಸಿ) ಮತ್ತು 2 ರವರು ನನ್ನ ಹೆಸರಿಗೆ ಬರೆದುಕೊಟ್ಟ ಮೂಲ ಜಿಪಿಎ

ನಿಶಾನೆ ಆರ್-6- ಸಾಗುವಳಿ ಚೀಟಿಯ ದೃಡೀಕೃತ ನಕಲು

ಆದ್ದರಿಂದ ಈ ಅರ್ಜಿಯನ್ನು ವಜಾಗೊಳಿಸಬೇಕಾಗಿ ಮಾನ್ಯ ನ್ಯಾಯಾಲಯಕ್ಕೆ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲು ತೀರ್ಪುದಾರರ ಪರವಾಗಿ ಶ್ರೀ ಎಸ್.ಎಸ್. ವಕೀಲರಿಂದ**

ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುವುದರಿಂದ ಪಾಟೀ ಸವಾಲು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಮುಜಫರ್)
ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್